ಉ) ಎನ್‌ಜಿಇಎಫ್ ಕಾರ್ಖಾನೆಯನ್ನು ಖಾಸಗಿಕರಣಗೊಳಿಸುವ ಅಗತ್ಯ ಇದೆಯೇ, ಕಾರ್ಖಾನೆಯನ್ನು ಸರ್ಕಾರವೇ ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೆ, ಈ ಕುರಿತು ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು, ಎನ್‌ಜಿಇಎಫ್ ಕಾರ್ಖಾನೆಯು ಹಾಲಿ ಸ್ಪರ್ಧಾತ್ಮಕ ಹಾಗೂ ಜಾಗತಿಕ ಸ್ಥಿತಿಯನ್ನು ಎದುರಿಸದೇ ಇದ್ದ ಕಾರಣದಿಂದ ಸರ್ಕಾರವು ಸದರಿ ಕಂಪನಿಯನ್ನು ಖಾಸಗಿಕರಣಗೊಳಿಸಲು ನಿರ್ಧರಿಸಿದೆ.

ಆ) ಜಾಗತಿಕ ಸಮಾಲೋಚಕರಾದ ಮೆ: ಅರ್ನೆಟ್ಸ್ ಅಂಡ್ ಯಂಗ್ ಪ್ರೈ ಲಿ. ಇವರನ್ನು ಕಂಪನಿಯ ಖಾಸಗೀಕರಣಕ್ಕಾಗಿ ಬಿಡ್ಡುಗಳನ್ನು ಆಹ್ವಾನಿಸಲು ನೇಮಿಸಿದ್ದು, ಅವರು ಈ ತಿಂಗಳ 4ನೇ ವಾರದಲ್ಲಿ ಜಾಹಿರಾತುಗಳನ್ನು ಬಿಡುಗಡೆ ಮಾಡುವರು.

ಇ) ದಿ: 1-7-2001ರವರೆಗೆ ಒಟ್ಟು ಕಾರ್ಮಿಕರ ಸಂಖ್ಯೆ 2890 ಇದೆ.

ಇವರಿಗೆ ನೀಡಲಾಗುತ್ತಿರುವ ವಾರ್ಷಿಕ ಒಟ್ಟು ವೇತನ ರೂ.36.00 ಕೋಟಿಗಳು (ಪಿಎಫ್ ವಂತಿಗೆ ಸಹಿತ) ಕಳೆದ 3 ವರ್ಷಗಳಲ್ಲಿ ಸ್ವಯಂ ನಿವೃತ್ತಿ ಹೊಂದಿರುವ ಕಾರ್ಮಿಕರ ಸಂಖ್ಯೆ 759. ಈಗಿನ ಒಟ್ಟು ಕಾರ್ಮಿಕರು 2890.

ಈ) ಕಂಪನಿಯ ಕಳೆದ 3 ವರ್ಷಗಳ ನಷ್ಟದ ವಿವರ ಕೆಳಕಂಡಂತಿದೆ.

1998-99	ರೂ.37.46 ಕೋಟಿಗಳು
1999-2000	ರೂ.18.43 ಕೋಟಿಗಳು
2000-01	ರೂ.32.00 ಕೋಟಿಗಳು (ಅಂದಾಜು)

ಉ) ಸ್ಪರ್ಧಾತ್ಮಕತೆ ಮತ್ತು ಜಾಗತೀಕರಣ ಸ್ಥಿತಿಯ ಹಿನ್ನಲೆಯಲ್ಲಿ ಸರ್ಕಾರವು ಸದರಿ ಕಂಪನಿಯನ್ನು ಖಾಸಗೀಕರಣಗೊಳಿಸಲು ನಿರ್ಧರಿಸಿದೆ. ಸರ್ಕಾರವು ಕಂಪನಿಯನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಶಪಡಿಸಿಕೊಂಡ ಜಮೀನು

2460(2596) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಬೆಂಗಳೂರು ನಗರದಲ್ಲಿ ಬಿಡಿಎ ಮತಿಯಿಂದ 1999-2000 ಮತ್ತು 2000-2001ನೇ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ಒಡೆದುಹಾಕಲಾಗಿದೆ ;

ಆ) ಇದರಿಂದ ಪ್ರಾಧಿಕಾರ ವಶಪಡಿಸಿಕೊಂಡಿರುವ ಜಮೀನಿನ ಬೆಲೆ ಎಷ್ಟು ;

ಇ) ಈ ಅನಧಿಕೃತ ನಿರ್ಮಾಣ ಕಟ್ಟಡ ಕಾರಣ ಕರ್ತರಾದ ಅಧಿಕಾರಿಗಳ ಮೇಲೆ ಎಷ್ಟು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) 1999-2000 ಮತ್ತು 2000-2001ನೇ ಸಾಲಿನಲ್ಲಿ ಅನುಕ್ರಮವಾಗಿ 307 ಮತ್ತು 247 ಅನಧಿಕೃತ ಕಟ್ಟಡಗಳನ್ನು ಒಡೆದು ಹಾಕಲಾಗಿದೆ.

ಆ) ವಶಪಡಿಸಿಕೊಂಡಿರುವ ಜಮೀನಿನ ಬೆಲೆ 225 ಕೋಟಿ ರೂಪಾಯಿಗಳು.

ಇ) ಈ ಅನಧಿಕೃತ ನಿರ್ಮಾಣಗಳಿಗೆ ಜವಾಬ್ದಾರರಾದ ಅಧಿಕಾರಗಳ ಹೆಸರನ್ನು ತಿಳಿಯಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದಲ್ಲಿರುವ ವೈನ್ ಶಾಪ್‌ಗಳ ವ್ಯವಹಾರದ ಸಮಯ

2461(2598) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿರುವ ವೈನ್ ಶಾಪ್‌ಗಳು ಮತ್ತು ಬಾರ್‌ಗಳ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

ಆ) ವೈನ್ ಶಾಪ್ ಮತ್ತು ಬಾರ್‌ಗಳು ಪ್ರತಿದಿನ ವ್ಯವಹಾರ ಸಮಯವನ್ನು ಸರ್ಕಾರ ನಿಗದಿಪಡಿಸಿದೆಯೇ? (ವಿವರಗಳನ್ನು ನೀಡುವುದು)

ಇ) ನಿಗದಿತ ಸಮಯದ ನಂತರವೂ ಕಾನೂನು ಬಾಹಿರವಾಗಿ ವ್ಯವಹಾರವನ್ನು ಮುಂದುವರಿಸುತ್ತಿರುವ ಈ ವೈನ್ ಶಾಪ್‌ಗಳಲ್ಲಿ ಕುಡಿಯಲು ಅವಕಾಶ ನೀಡುತ್ತಿರುವ ಪ್ರಕರಣಗಳಲ್ಲಿ ಸರ್ಕಾರ ಜರುಗಿಸಿದ ಕ್ರಮವೇನು?

ಈ) ಕಳೆದ 3 ವರ್ಷಗಳಲ್ಲಿ ಕ್ರಮವಾಗಿ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ?